ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನೀವು ಕೇಂದ್ರಸರ್ಕಾರ ೫೦ ಪರ್ಸೆಂಟ್ ಕೊಡುತ್ತದೆ, ನಮ್ಮ ರಾಜ್ಯ ಸರ್ಕಾರ ೫೦ ಪರ್ಸೆಂಟ್ ಕೊಡುತ್ತದೆಂದು ಹೇಳಿದಿರಿ. ನಮಗೆ ತಿಳಿದು ಬಂದಿರುವ ಪ್ರಕಾರ ೧೦೦ ಪರ್ಸೆಂಟ್ ಗ್ರಾಂಟ್‌ನ್ನೂ ಕೇಂದ್ರಸರ್ಕಾರವೇ ಕೊಡುತ್ತದೆ. ನಮ್ಮ ತಾಲ್ಲೂಕಿನಲ್ಲಿ ಒಂದು ಆಹ್ವಾನಪತ್ರಿಕೆಯನ್ನು ಮಾಡಿ ಮಾನ್ಯ ಮಂತ್ರಿಗಳು ಒಂದು ಉದ್ಘಾಟನೆಯನ್ನು ಮಾಡಿದ್ದಾರೆ. ಅದರ ಹೆಸರು ಏನೆಂದರೆ "ಜೀತ ವಿಮುಕ್ತರ ಪುನರ್ವಸತಿ ಕಲ್ಪನಾ ಸಮಿತಿ, ಗುಂಡ್ಲುಪೇಟೆ" ಎಂದು ನಾನು ೨೦ ಅಂಶದ ಕಾರ್ಯಕ್ರಮದ ಬಗ್ಗೆ ಆಫೀಸಿನಲ್ಲಿ ಮೀಟಿಂಗ್ ಮಾಡುತ್ತಿದ್ದರೆ, ಮಾನ್ಯ ಸಚಿವರು ಪುರಸಭೆಯಲ್ಲಿ ನಿಂತುಕೊಂಡು ಮೀಟಿಂಗ್ ಮಾಡುತ್ತಿದ್ದರು. ಎಲ್ಲರಿಗೂ ನಾನೇ ದುಡ್ಡನ್ನು ಕೊಟ್ಟಿದ್ದೇನೆ, ನನ್ನ ಸರ್ಕಾರದ ದುಡ್ಡು ಇದು, ಎಂದು ಜನರಿಗೆ ತಪ್ಪು ಮಾಹಿತಿಗಳನ್ನು ಕೊಟ್ಟು ಜನರಲ್ಲಿ ತಪ್ಪು ಕಲ್ಪನೆ ಬರುವಂತೆ ಹೇಳುತ್ತಿದ್ದಾರೆ. ಇದು ಬೇಡ. ಈ ರೀತಿ ಮಾಡಬೇಡಿ ಎಂದು ಹೇಳಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಅಧ್ಯಕ್ಷರೆ, ಅವರು ತಪ್ಪು ಕಲ್ಪನೆಯನ್ನು ಮಾಡಿಕೊಂಡಿದ್ದಾರೆ. ನಾನು ತಪ್ಪು ಮಾಹಿತಿಯನ್ನು ಕೊಟ್ಟಿಲ್ಲ. ನಾನು ಸರಿಯಾಗಿಯೇ ಹೇಳಿದ್ದೇನೆ. ಶೇಕಡ ೫೦ರಷ್ಟು ಹಣವನ್ನು ಕೇಂದ್ರಸರ್ಕಾರ ಮತ್ತು ಇನ್ನುಳಿದ ಶೇಕಡ ೫೦ ಪರ್ಸೆಂಟ್ ಹಣವನ್ನು ನಮ್ಮ ರಾಜ್ಯ ಸರ್ಕಾರ ಭರಿಸುತ್ತದೆ. ಈಸಾರಿ ೬೫೦೦ ಜನರಿಗೆ ಪುನರ್ವಸತಿಯನ್ನು ಕಲ್ಪಿಸಿಕೊಡಿ ಎಂದು ಹಣವನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಏನು ಹೇಳಿದೆ ಎಂದರೆ, ಕೇವಲ ೬೫೦೦ ಜನ ಅಲ್ಲ, ಎಲ್ಲಾ ೧೪ ಸಾವಿರ ಜನರಿಗೂ ಪುನರ್ವಸತಿ ಕಲ್ಪಿಸಿಕೊಡಬೇಕು. ನಮ್ಮ ರಾಜ್ಯಸರ್ಕಾರದ ಭಾಗದ ಹಣವನ್ನು ನಾವು ಕೊಡುತ್ತೇವೆ, ನೀವು ಕೇಂದ್ರ ಸರ್ಕಾರದ ತಮ್ಮ ಭಾಗದ ಹಣವನ್ನು ಕೊಡಿ ಎಂದು ಈಗಾಗಲೇ, ನಾನು ಪತ್ರವನ್ನು ಬರೆದಿದ್ದೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಕೇಂದ್ರಸರ್ಕಾರ ಎಷ್ಟು ಹಣವನ್ನು ಕೊಟ್ಟಿದೆ ? ಅರ್ಧ ದಷ್ಟು ಹಣ ಕೊಟ್ಟಿದೆ ಎಂದು ಹೇಳುತ್ತಿದ್ದೀರಿ, ಅವರು ಎಷ್ಟು ಕೊಟ್ಟಿದ್ದಾರೆ ಎಂಬುದನ್ನು ಹೇಳಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—೬೫೦೦ ಜನರಿಗೆ ಎಂದು ಕೇಂದ್ರಸರ್ಕಾರದವರು ನಿಗದಿ ಮಾಡಿದ್ದಾರೆ. ಇವರಿಗೆ ಈಗ ಅರ್ಧದಷ್ಟು ಹಣವನ್ನು ಕೊಟ್ಟಿದ್ದಾರೆ. ಇನ್ನುಳಿದ ಅರ್ಧದಷ್ಟು ಹಣವನ್ನು ಇನ್ನು ೬ ತಿಂಗಳ ನಂತರ ಕೊಡುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಪರಿಷತ್ತು ಹಾಗೂ ಮಂಡಲ ಪಂಚಾಯಿತಿಗಳಿಗೆ ಒದಗಿಸಿದ ಹಣದ ಬಗ್ಗೆ

೬೯೭. ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ಪಕ್ಷೇತ್ತ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಪರಿಷತ್ತು ಹಾಗೂ ಮಂಡಲ ಪಂಚಾಯಿತಿಗಳಿಗೆ ಒದಗಿಸಿರುವ ಹಣವೆಷ್ಟು (ಜಿಲ್ಲಾ ಪರಿಷತ್ತು ಮತ್ತು ಮಂಡಲವಾರು ವಿವರ ನೀಡಬೇಕಾಗಿ ವಿನಂತಿ)

ಆ) ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಿಗೆ ವೆಚ್ಚವಾಗಿರುವ ಹಣವೆಷ್ಟು (ಜಿಲ್ಲಾ ಪರಿಷತ್ತು ಹಾಗೂ ಮಂಡಲವಾರು ವಿವರಗಳನ್ನೊದಗಿಸಬೇಕಾಗಿ ವಿನಂತಿ)

ಇ) ಜಿಲ್ಲಾ ಪರಿಷತ್ತಿನ ಹಾಗೂ ಮಂಡಲ ಪಂಚಾಯಿತಿಗಳ ಸಿಬ್ಬಂದಿ ವರ್ಗದವರಿಗೆ ವೆಚ್ಚವಾಗಿರುವ ಹಣವೆಷ್ಟು (ಜಿಲ್ಲಾ ಪರಿಷತ್ತು ಹಾಗೂ ಮಂಡಲವಾರು ವಿವರಗಳನ್ನು ಪ್ರತ್ಯೇಕವಾಗಿ ಒದಗಿಸಬೇಕಾಗಿ ವಿನಂತಿ)

ಶ್ರೀ ಅಬ್ದುಲ್ ನಜೀರ್ ಸಾಬ್(ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

ಅ) ೨೭೯೦ ಲಕ್ಷಗಳು ಆಗಸ್ಟ್ ತಿಂಗಳು ಕೊನೆಯವರೆವಿಗೆ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗಿದೆ.

ಆ) ಒಟ್ಟು ರೂ. ೩೭,೬೫,೪೦೩—೯೭ ಖರ್ಚಾಗಿದೆ.

ಇ) ಒಟ್ಟು ರೂ. ೩,೦೩,೯೫,೩೨೨—೫೦ ಪೈಸೆ ಖರ್ಚಾಗಿದೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿರುವ ಪ್ರಕಾರ ೨೩ ಕೋಟಿ ರೂಪಾಯಿಗಳನ್ನು ಕಳುಹಿಸಿದ್ದರೆ ಅದರಲ್ಲಿ ಖರ್ಚಾಗಿರತಕ್ಕದ್ದು ಕೇವಲ ೩೭,೬೫,೪೪೩ ರೂಪಾಯಿಗಳು ಮಾತ್ರ. ಅಂದರೆ ಇನ್ನು ಬಾಕಿ ಹಣ ಖರ್ಚಾಗದೆ ಉಳಿದಿರುವುದಕ್ಕೆ ಕಾರಣ ಏನು ? ಮತ್ತು ನಾನು ಇಲ್ಲಿ ಮಂಡಲವಾರು ಪ್ರಶ್ನೆಯನ್ನು ಕೇಳಿದ್ದೇನೆ, ಪ್ರತಿ ಮಂಡಲ ಪಂಚಾಯತಿಗೂ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೀರಿ ಎನ್ನುತಕ್ಕ ಬಗ್ಗೆ ವಿವರವನ್ನಾದರೂ ಕೊಡಬಹುದೆ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಸ್ಥೂಲವಾಗಿ, ೨೪೦೦ ಮಂಡಲಗಳಿವೆ. ಬಜೆಟರಿ ಪ್ರಾವಿಷನ ಏನಿದೆ ಅದರ ಪ್ರಕಾರ ಸರ್ಕಾರದಿಂದ ಜಿಲ್ಲಾ ಪರಿಷತ್ತುಗಳಿಗೆ ಒಟ್ಟು ಹಣವನ್ನು ಕೊಡುತ್ತೇವೆ. ಆ ಜಿಲ್ಲಾ ಪರಿಷತ್ತುಗಳು ತಮ್ಮ ಅಧೀನದಲ್ಲಿ ಬರತಕ್ಕ ಮಂಡಲಗಳಿಗೆ ಯಾವ ಯಾವ ಮಂಡಲ ಪಂಚಾಯತಿಗಳಿಗೆ ಎಷ್ಟೆಷ್ಟು ಹಣ ಕೊಡಬೇಕೆಂಬುದನ್ನು ನೋಡಿಕೊಂಡು ಆ ಜಿಲ್ಲಾ ಪರಿಷತ್ತುಗಳು ಹಣವನ್ನು ವರ್ಗಾಯಿಸುತ್ತದೆ. ಆದರೆ ಮಂಡಲವಾರು ಮಾಹಿತಿ ನನ್ನ ಹತ್ತಿರ ಇಲ್ಲ. ಬೇಕಾದರೆ ಮಾನ್ಯ ಸದಸ್ಯರಿಗೆ ವಿವರಗಳನ್ನು ತರಿಸಿಕೊಡುತ್ತೇನೆ.

ಇನ್ನು ಎರಡನೆಯದಾಗಿ, ಕೊಟ್ಟಂಥ ಹಣ ಪೂರ್ತಿ ಏತಕ್ಕೆ ಖರ್ಚಾಗಲಿಲ್ಲ ಎನ್ನುವ ಬಗ್ಗೆ ಹೇಳುವುದಾದರೆ ಬಹುಶಃ ಇದು ಒಂದು ಕಲ್ಪನೆ ಮಾನ್ಯ ಸದಸ್ಯರಿಗೆ ಇರಬಹುದು. ಮಂಡಲದಲ್ಲಿ ದುಡ್ಡಿಲ್ಲ, ಆದ್ದರಿಂದ ಹಣ ಖರ್ಚಾಗುತ್ತಿಲ್ಲವೆಂದು ಹೇಳುವುದು ಸರಿಯಲ್ಲ. ಮಾರ್ಚ್, ಏಪ್ರಿಲ್, ಮೇ, ಜೂನ್, ಜುಲೈ ತಿಂಗಳುಗಳಲ್ಲಿ ಕೆಲಸ ಆಗಬೇಕಾದರೆ ಗ್ರಾಮೀಣ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಎಲ್ಲಾ ಯೋಜನೆಗಳಿಗೂ ಕೇಂದ್ರದ ಅನುಮತಿ ಬೇಕು. ಕೇಂದ್ರ ಸರ್ಕಾರದ ಅಧಿಕಾರಿಗಳು, ಮತ್ತು ನಮ್ಮ ಸರ್ಕಾರದ ಅಧಿಕಾರಿಗಳು ಇರತಕ್ಕ ಒಂದು ಸಮಿತಿ ಈ ಯೋಜನೆಗಳನ್ನು ಅನುಮೋದಿಸಬೇಕು. ಆರ್.ಎಲ್.ಇ.ಜಿ.ಪಿ.ಗೆ ಕೇಂದ್ರ ಸರ್ಕಾರವೇ ಅನುಮತಿ ಕೊಡಬೇಕು, ಡಿ.ಪಿ.ಎ.ಪಿ. ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರವೇ ನೋಡಿ ಒಪ್ಪಿಗೆಯನ್ನು ಕೊಡಬೇಕು. ವೆಸ್ಟ್‌ಲ್ಯಾನ್ ಫಾಟ್‌ಗೂ ಕೂಡ ಕೇಂದ್ರ ಸರ್ಕಾರದವರೇ ಅಪ್ರೂವಲ್ ಕೊಡಬೇಕು. ಆದರೆ ಅವರು ಇದಕ್ಕೆ ಪಂಜೂರಾತಿಯನ್ನು ಕೊಡತಕ್ಕದ್ದು ನಿಧಾನವಾದುದೂ ಒಂದು ಕಾರಣ.

ಇನ್ನು ಎರಡನೇ ಕಾರಣ ಎಂದರೆ, ಈ ಯೋಜನೆಗಳ ಪೈಕಿ ಹಿಂದಿನ ವರ್ಷ ಮುಗಿಯದೇ ಇರತಕ್ಕ ಕೆಲಸಗಳು ಮತ್ತು ಹೊಸ ಕೆಲಸಗಳು ಎಂದು ೨ ಭಾಗ ಇದೆ. Part One of the Action Plan is Carry over works. ಈಗ ಒಂದು ಸ್ಕೂಲ್ ಬಿಲ್ಡಿಂಗ್‌ಗೆ ೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಇನ್ನು ೧೦ ಸಾವಿರ ರೂಪಾಯಿಗಳನ್ನು ಕಾರ್ಯ ಯೋಜನೆಯಲ್ಲಿ ಖರ್ಚು ಮಾಡಿಲ್ಲ. ಇನ್ನೂ ಹತ್ತು ಸಾವಿರ ಖರ್ಚು ಮಾಡಬೇಕಾಗಿರುತ್ತದೆ. ಆದರೆ ಈ ಕೆಲಸ ಮಾಡಬೇಕಾದಂಥ ಬಿ.ಡಿ.ಓ., ಜಿಲ್ಲಾ ಪರಿಷತ್ ಇಂಜಿನಿಯರ್‌ರವರನ್ನು ವಿಭಾಗ ಮಾಡಬೇಕಾಗಿದೆ, ಅವರು ಟ್ರಾನ್ಸ್‌ಫರ್ ಆಗಬೇಕಾಗಿದೆ. ತಾಂತ್ರಿಕ ವರ್ಗಾವರ್ಗಿ ಮಾಡಿ ಯಾವ ಯಾವ ಅಧಿಕಾರಿಗಳು ಏನೇನು ಕಾರ್ಯಕ್ರಮ ಮಾಡಬೇಕು ಎನ್ನುವುದನ್ನು ನಿಗದಿ ಮಾಡುವುದರಲ್ಲಿ ನಿಧಾನವಾಗಿದೆ. ಅಧ್ಯಕ್ಷರು ಏನೇನು ಕಾರ್ಯಕ್ರಮಗಳನ್ನು ಮಾಡಬೇಕಾಗಿರುತ್ತದೋ ಅದೆಲ್ಲವನ್ನೂ ಮಾಡಲು ಭರವಸೆಯನ್ನು ಕೊಟ್ಟಿದ್ದಾರೆ. ನವೆಂಬರ್ ತಿಂಗಳಲ್ಲಿ ಕೊಟ್ಟಿರತಕ್ಕಂಥ ಹಣದ ೧೯ರಿಂದ ೨೦ ರವರೆಗೆ ಖರ್ಚು ಮಾಡುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ಮತ್ತೆ ವಿಭಾಗ ತಪಾಸಣೆ ಮಾಡುತ್ತೇವೆಂದು ಕೂಡ ಹೇಳಿದ್ದಾರೆ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಈಗ ೧೨ ಗಂಟೆಯಾಗುತ್ತಿದೆ. ಉಳಿದ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡಬೇಕಾಗುತ್ತದೆ. ದಯವಿಟ್ಟು ನಿಮಗೆ ಅವಕಾಶವಿಲ್ಲ, ಕುಳಿತುಕೊಳ್ಳಿ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ಸಿಬ್ಬಂದಿ ವರ್ಗಕ್ಕೆ ಮೂರು ಕೋಟಿ ಮೂರು ಲಕ್ಷ ಹೊಂಭತ್ತೈದು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿರುತ್ತೇವೆಂದು ಹೇಳಿದರು. ನಮಗೆ ತಿಳಿದಮಟ್ಟಿಗೆ ವರ್ಷ ಒಂದಕ್ಕೆ ಮೂರು ಕೋಟಿ ರೂಪಾಯಿಗಳ ಹಣ ಬೇಕಾಗುತ್ತದೆ. ಜಿಲ್ಲಾ ಪರಿಷತ್ ಬಂದಮೇಲೆ ಎಷ್ಟು ಹಣ ಬಂದಿತೋ ಅಷ್ಟು ಹಣ ಖರ್ಚಾಗಬೇಕಾಗಿತ್ತು. ಅಷ್ಟು ಹಣವನ್ನು ಖರ್ಚು ಮಾಡಿಲ್ಲ. ಬಾಕಿ ಎಲ್ಲ ಹಣ ಎಲ್ಲಿ ಹೋಯಿತು ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಮೊದಲನೆಯ ಎರಡು ತಿಂಗಳ ಅಕೌಂಟ್ ಗೌರ್ನಮೆಂಟ್ ಅಕೌಂಟ್ ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಮೊದಲನೆ ಎರಡು ತಿಂಗಳಲ್ಲಿ ಯಾವುದೇ ಜಿಲ್ಲಾ ಪರಿಷತ್ತಿಗೆ ಅಕೌಂಟ್ಸ್ ಆಫೀಸರನ್ನು ಹಾಕಿರಲಿಲ್ಲ. ಆದ್ದರಿಂದ ಹಣ ಗೌರ್ನಮೆಂಟ್ ಅಕೌಂಟಿಗೆ ಹೋಗಿದೆ.

ಶ್ರೀ ಜಿ. ಎಸ್. ಆಚಾರ್.—ಸೆಕ್ಟರ್‌ವೈಸ್ ಪ್ಲಾನಿಂಗ್.....

ಅಧ್ಯಕ್ಷರು.—ನಿಮಗೆ ಅವಕಾಶ ಕೊಟ್ಟಿಲ್ಲ. ಇವೊತ್ತು ೩೦ ಪ್ರಶ್ನೆಗಳಿವೆ. ನನಗೂ ಸ್ವಲ್ಪ ಜವಾಬ್ದಾರಿ ಇದೆ.

ಶ್ರೀಮತಿ ಕೆ. ಎಸ್. ನಾಗರತ್ನಪ್ಪ.—೩೦ ಪ್ರಶ್ನೆಗಳನ್ನು ಒಂದೇ ದಿವಸದಲ್ಲಿ ಹಾಕಿದರೆ ಹೇಗೆ ಮುಗಿಸುವುದಕ್ಕೆ ಆಗುತ್ತದೆ ?

ಅಧ್ಯಕ್ಷರು.— ತಾವು ಅಧ್ಯಕ್ಷರಾಗಿದ್ದಂಥ ಕಾಲದಲ್ಲಿ ಬಹಳಷ್ಟು ಪ್ರಶ್ನೆಗಳು ಲ್ಯಾಪ್ಸ್ ಆಗಿರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಅವರು ಅವಕಾಶ ಕೊಡಲಿಲ್ಲ ಹಾಗೆ ಎಂದು ನೀವು ಕೊಡ ಬಾರದೆಂದು ಹೇಳುತ್ತೀರಾ ? ಅವರು ಏನು ಹೇಳಿದರು ಎಂದರೆ ಮೊದಲು ಹತ್ತು ಪ್ರಶ್ನೆಗಳನ್ನು ಹಾಕುತ್ತಿದ್ದರು, ಈಗ ನೀವು ೨೦ ಮಾಡಿದಿರಿ, ಪಂತ್ತ ಮ್ಯಾಕ್ಸಿಮಮ್ ೩೦ ಪ್ರಶ್ನೆಗಳನ್ನು ಮಾಡಿದ್ದೀರಿ. ಇದರಿಂದ ಯಾರಿಗೂ ಸಮಾಧಾನಕರವಾಗಿ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು.— ಅದು ಈ ಸದನವೇ ಮಾಡಿರತಕ್ಕಂಥ ರೂಲ್ಸ್, ಅವರು ಹೇಳತಕ್ಕಂಥದು ಕರೆಕ್ಟ್ ಇದೆ.

ಶ್ರೀ ಎಂ. ಮಲ್ಲಿಕಾರ್ಜುನಖಾರ್ಗೆ.— ಕೆಲವೊಂದು ಬಹಳ ಮಹತ್ವದ್ದು ಪ್ರಶ್ನೆಗಳು ಇರುತ್ತದೆ. ಆ ಪ್ರಶ್ನೆಗಳಿಗೆ ಅವಕಾಶವನ್ನು ಮಾಡಿಕೊಡಬೇಕು.

(ಗೊಂದಲ)

ಶ್ರೀ ಬಿ. ಎಸ್. ಆಚಾರ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ನೀಡುತ್ತಾ ಸಿಬ್ಬಂದಿ ಸಂಬಳಕ್ಕಾಗಿ ೫ ತಿಂಗಳಿಗೆ ಬರೀ ಮೂರು ಕೋಟಿ ಮೂರು ಲಕ್ಷ ತೊಂಭತ್ತೈದು ಸಾವಿರ ರೂಪಾಯಿಗಳು ವೆಚ್ಚವಾಗಿದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನನಗೆ ತಿಳಿದ ಮಟ್ಟಿಗೆ ಒಂದು ತಿಂಗಳಿಗೆ ಮೂರುಕಾಲು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಸುಮಾರು ೧೬ ಕೋಟಿ ರೂಪಾಯಿಗಳು ದಕ್ಷಿಣ ಕನ್ನಡ ಜಿಲ್ಲೆಗೆ ಸಿಬ್ಬಂದಿ ವೆಚ್ಚಕ್ಕೆ ಖರ್ಚು ಮಾಡಬೇಕಾಗಿದೆ. ತಾವು ೨೨ ಕೋಟಿ ರೂಪಾಯಿಗಳನ್ನು ಈಗಾಗಲೇ ಕೊಡಲಾಗಿದೆ ಎಂದು ಹೇಳಿದ್ದೀರಿ. ಮೂರು ಕೋಟಿ ಸಿಬ್ಬಂದಿ ಸಂಬಳಕ್ಕೆ, ೩೭ ಲಕ್ಷ ಅಭಿವೃದ್ಧಿ ಕಾರ್ಯಗಳಿಗೆ ವೆಚ್ಚವಾಗಿದೆ. ಉಳಿದ ಹಣ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನಲ್ಲಿದೆ ಎನ್ನುವುದು ಅಭಿಪ್ರಾಯವಿದೆ. ಅದು ಹೇಗೆ ಉಳಿಯಿತು.

ಎರಡನೆಯದಾಗಿ, ಕಳೆದ ವರ್ಷ ಮಂಜೂರಾತಿಯಾಗಿ ಕೈಯಲ್ಲಿದ್ದುದು, ಉಡುಪಿ ಜಿಲ್ಲಾ ಪರಿಷತ್ ಸಬ್ ಡಿವಿಜನ್‌ನಲ್ಲಿ ಅದನ್ನು ಪೂರ್ಣ ಮಾಡಲಿಕ್ಕೆ ೬೫ ಲಕ್ಷ ರೂಪಾಯಿ, ಮಂಗಳೂರು ಜಿಲ್ಲಾಪರಿಷತ್ತಿಗೆ ೮೦ ಲಕ್ಷ ರೂಪಾಯಿ, ಬೋಟಲಿ ೧೬೫ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಅದಕ್ಕೆ ಏನು ವ್ಯವಸ್ಥೆಯನ್ನು ಮಾಡಿಲ್ಲ. ತಮ್ಮ ಸೆಕ್ಟಾರ್‌ವೈಸ್ ಪ್ಲಾನಿಂಗ್ ವ್ಯವಸ್ಥೆಯಲ್ಲಿ ಅದರ ಪ್ರಕಾರ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೂ ಮಂಡಲ್ ಪಂಚಾಯತ್‌ಗಳಿಗೆ ಹಣ ಬೇಕಾಗಿದೆ. ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೂ ಹಣವನ್ನು ಪೂರೈಸಲು ಇದನ್ನು ಬದಲಾವಣೆ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಅಬ್ದುಲ್‌ನಜೀರ್‌ಸಾಬ್.— ಬಹುಶಃ ನಾನು ಹೇಳಿದ ಉತ್ತರವನ್ನು ತಾವು ಗಮನವಿಟ್ಟು ಕೇಳಲಿಲ್ಲವೆಂದು ಕಾಣುತ್ತದೆ. ಶ್ರೀಮತಿ ಮನೋರಮಾ ಅವರು ಕೇಳಿದಾಗ ಹೇಳಿದೆ. ಮೊದಲ ಎರಡು ತಿಂಗಳ ಕಾಲ ಈ ಸಂಬಳ ಜಿಲ್ಲಾಪರಿಷತ್ತಿನ ಅಕೌಂಟಿಗೆ ಬದಲಾಗಿ ಸರ್ಕಾರದ ಅಕೌಂಟಿಗೆ ಹೋಗಿದೆ. ಜೂನ್ ಮಾಹೆಯದನ್ನು ಹೇಳಿದೆ. ಅದನ್ನು ತಾವು ಗಮನಿಸಲಿಲ್ಲ. ಯಾವುದು ಆಕ್ಷನ್ ಪ್ಲಾನ್ ಎಂಬುದು ಗೊತ್ತಿದೆ, ನಾನು ಹತ್ತಾರು ಬಾರಿ ತಮ್ಮ ಜಿಲ್ಲೆಗೆ ಬಂದಾಗ ಚರ್ಚೆ ಮಾಡಿದ್ದೇನೆ.

Action Plan of NREP, RLEGP or western Ghats, Part–1 is the spill–over and Part–2 is the fresh work. ಎಷ್ಟು ಹಣ ಕೊಡಬೇಕೋ ಅಷ್ಟನ್ನು ಆಪ್ರೂವ್ಡ್ ಪ್ಲಾನ್‌ನಲ್ಲಿ ಇಟ್ಟಿದೆ. ಪಾರ್ಟ್ ೨ಕ್ಕೂ ಕೂಡ ಅಷ್ಟೇ ಹಣವನ್ನು ಕೊಡುತ್ತೇವೆ. If it is approved action plan the spillover work is carried out in accordance with the plan and the money will be given. ಅದಕ್ಕೆ ಏನೂ ಸಮಸ್ಯೆ ಇಲ್ಲ.

ಶ್ರೀ ಜಿ. ಎಸ್. ಆಚಾರ್.— ಸಿದ್ಧಾಂತದ ಪ್ರಕಾರ ಹೇಳುವುದಾದರೆ ಕೆಲಸ ಆಗಿಲ್ಲ...

ಶ್ರೀ ಅಬ್ದುಲ್ ನಜೀರ್‌ಸಾಬ್.— ನಾನು ಈ ತಿಂಗಳ ಕೊನೆಯಲ್ಲಿ ಅಲ್ಲಿಗೆ ಹೋಗುತ್ತಿದ್ದೇನೆ. ಅಲ್ಲಿನ ಜಿಲ್ಲಾ ಪರಿಷತ್ತಿನ ಅಧ್ಯಕ್ಷರನ್ನು ಕೂಡಿಸಿಕೊಂಡು ಸರಿ ಮಾಡಿಕೊಡುತ್ತೇನೆ.

೧೯೮೬–೮೭ನೇ ಸಾಲಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಲಾದ ನಿವೇಶನಗಳ ವಿವರ

೧೪. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).— ಮಾನ್ಯ ವಾರ್ತಾ ಪ್ರವಾಸೋದ್ಯಮ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬–೮೭ನೇ ಸಾಲಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಲಾದ ನಿವೇಶನಗಳ ಸಂಖ್ಯೆ ಎಷ್ಟು ?

ಆ) ಸದರಿ ಹಂಚಿಕೆಯಲ್ಲಿ ಸರ್ಕಾರಿ ಅಧಿಕಾರಿಗಳಿಗೆ ನೌಕರರಿಗೆ ಹಂಚಲಾದ ನಿವೇಶನಗಳ ಸಂಖ್ಯೆ ಎಷ್ಟು (ಹೆಸರು, ವಿಳಾಸ, ಇಲಾಖೆ ವಿವರ ನೀಡುವುದು)

ಇ) ಈ ಹಂಚಿಕೆಯಲ್ಲಿ ಸಚಿವರ ಹಾಗೂ ಶಾಸಕರುಗಳ ಶಿಫಾರಸ್ಸಿನ ಮೇಲೆ ಹಂಚಲಾದ ನಿವೇಶನಗಳ ಸಂಖ್ಯೆ ಎಷ್ಟು (ಅವರ ಹೆಸರು ಒದಗಿಸುವುದು)

ಈ) ಸದರಿ ಹಂಚಿಕೆಯಲ್ಲಿ ಅನ್ಯಾಯವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಉ) ಸದರಿ ಹಂಚಿಕೆಯಲ್ಲಿ ಪರಿಜನ–ಗಿರಿಜನರಿಗೆ ಹಂಚಲಾದ ನಿವೇಶನಗಳ ಸಂಖ್ಯೆ ಎಷ್ಟು?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂತ್ರಿಗಳು).—

ಅ) ೧೯೮೬–೮೭ನೇ ಆರ್ಥಿಕ ಸಾಲಿನಲ್ಲಿ ಒಟ್ಟು ೧೯೧೫ ನಿವೇಶನಗಳನ್ನು ಮತ್ತು ೪೧ ಬಿಡಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

ಆ) ಹಂಚಿಕೆ ನಿಯಮಾವಳಿ ರೀತ್ಯಾ ಹಂಚಿಕೆ ಮಾಡಿದ ವಿವರ ಈ ಕೆಳಕಂಡಂತಿದೆ.

೧) ರಾಜ್ಯ ಸರ್ಕಾರಿ ನೌಕರರು ಶೇ ೧೦ ಒಟ್ಟು ೧೫೪ ನಿವೇಶನಗಳು.

೨) ಕೇಂದ್ರ ಸರ್ಕಾರ ಸ್ವಾಯತ್ತ ಸಂಸ್ಥೆ, ಅಧೀನ ಸಂಸ್ಥೆ ನೌಕರರುಗಳಿಗೆ ಶೇ ೮ ಒಟ್ಟು ೧೨೪ ನಿವೇಶನಗಳು. ಹಂಚಿಕೆದಾರರ ಪಟ್ಟಿ ಲಗತ್ತಿಸಲಾಗಿದೆ. ವಿಳಾಸ, ಇಲಾಖೆ ವಿವರಗಳನ್ನು ಒದಗಿಸಲಾಗುವುದು.

ಇ) ಇಲ್ಲ.

ಈ) ಇಲ್ಲ. ಯಾರಿಗೂ ಅನ್ಯಾಯವಾಗಿಲ್ಲ.

ಉ) ನಿಯಮಾವಳಿಯಲ್ಲಿ ಕಲ್ಪಿಸಿರುವ ಅವಕಾಶದಂತೆ, ೧೯೧೫ ನಿವೇಶನಗಳಲ್ಲಿ ಈ ಕೆಳಕಂಡಂತೆ ಹಂಚಿಕೆ ಮಾಡಲಾಗಿದೆ:–

ಅ) ಪರಿಶಿಷ್ಟ ಪಂಗಡ (ಎಸ್‌ಟಿ) ಶೇ ೩ ಒಟ್ಟು ೪೫ ನಿವೇಶನಗಳು.
ಆ) ಪರಿಶಿಷ್ಟ ಜಾತಿ (ಎಸ್‌ಸಿ) ಶೇ ೧೩ ಒಟ್ಟು ೨೦೨ ನಿವೇಶನಗಳು.
ಇ) ಬಿ.ಟಿ. ಶೇ ೨ ಒಟ್ಟು ೩೦ ನಿವೇಶನಗಳು.